**<u>ದಿನಾಂಕಃ05.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು 2ನೇ ಪ್ರತಿವಾದಿ ಪರ ಶ್ರೀ. ಹೆಚ್ ಕೆ ಜಿ ವಕೀಲರಿಂದಃ-</u>**

1. ನಾನು 8ನೇ ತರಗತಿ ಅನುತ್ತೀರ್ಣ. ನನ್ನ ತಂದೆಗೆ ನಾನು ಸೇರಿ ಇಬ್ಬರು ಮಕ್ಕಳು. ನನ್ನ ತಂದೆ 2017ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾಯಿ ಈಗ್ಗೆ ಸುಮಾರು ಒಂದುವರೆ ವರ್ಷದ ಹಿಂದೆ ಮರಣ ಹೊಂದಿದ್ದಾರೆ. ದಾವಾ ಆಸ್ತಿ ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಗಳನ್ನು ನಾನು ಮತ್ತು 2ನೇ ಪ್ರತಿವಾದಿ ನನ್ನ ಸಹೋದರ ರಾಜೇಶ ಈಗಾಗಲೇ 18.04.2016ರಲ್ಲಿ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಜಮೀನನ್ನು ಮಾತ್ರ ಹಂಚಿಕೊಂಡಿದ್ದೇವೆ ಆದರೆ ದಾವಾ ಆಸ್ತಿ ಮನೆಯನ್ನು ಹಂಚಿಕೊಂಡಿಲ್ಲ ಎನ್ನುತ್ತಾರೆ.

2. ನನಗೆ 25*28 ವಿಸ್ತೀರ್ಣದ ನಿವೇಶನವನ್ನು ಕೊಟ್ಟು 2ನೇ ಪ್ರತಿವಾದಿ ದಾವಾ ಆಸ್ತಿಯನ್ನು ತಮ್ಮ ಬಳಿಯೇ ಉಳಿಸಿಕೊಳ್ಳಲು ರೂ.5,75,000/- ಹಣವನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ನಂಜುಂಡ ಬಿನ್ ಶ್ರೀಕಂಠೇಗೌಡರ ಸಮ್ಮುಖದಲ್ಲಿ 2ನೇ ಪ್ರತಿವಾದಿ ನನಗೆ ರೂ.5,75,000/- ಹಣವನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಿ.22.07.2020ರಂದು ದಾವಾ ಆಸ್ತಿಯನ್ನು 2ನೇ ಪ್ರತಿವಾದಿ ತನ್ನ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ನಾನು ಒಪ್ಪಿಗೆ ಪತ್ರ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಒಪ್ಪಿಗೆ ಪತ್ರಕ್ಕೆ ನಾನು ಮತ್ತು ನನ್ನ ತಾಯಿ ಸಹಿ ಮಾಡಿದ್ದೇವೆ ಎಂದರೆ ಸಾಕ್ಷಿಯು 2ನೇ ಪ್ರತಿವಾದಿ

ದಾವಾ ಆಸ್ತಿಯನ್ನು ನನ್ನ ತಾಯಿಯ ಹೆಸರಿಗೆ ಖಾತೆ ಮಾಡಿಸುತ್ತೇನೆ ಎಂದು ಸಹಿ ಪಡೆದು ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎನ್ನುತ್ತಾರೆ. 2ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯು ಖಾತೆ ಆಗಿದ್ದನ್ನು ಈಓ, ತಾಲ್ಲೂಕು ಪಂಚಾಯಿತಿಯ ಮುಂದೆ ಖಾತೆ ವಜಾ ಮಾಡುವಂತೆ ಅಪೀಲು ಮಾಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ನೇರವಾಗಿ ನ್ಯಾಯಾಲಯಕ್ಕೆ ದಾವೆ ಹಾಕಿದ್ದೇನೆ ಎನ್ನುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ 2ನೇ ಪ್ರತಿವಾದಿಯೇ ಕಂದಾಯ ವಗೈರೆ  ಕಟ್ಟುತ್ತಿದ್ದಾರೆ ಎನ್ನುತ್ತಾರೆ. ತಾವು ಕಂದಾಯ ಕಟ್ಟಿದ್ದರ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

3. 2ನೇ ಪ್ರತಿವಾದಿಯು ದಾವಾ ಸ್ವತ್ತಿಗೆ ವಿದ್ಯುತ್ ಶ್ಚಕ್ತಿ ಮತ್ತು ನೀರಿನ ಸೌಲಭ್ಯ ಪಡೆದು ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ.  ದಾವಾ ಆಸ್ತಿಯಲ್ಲಿ ಭಾಗಾಂಶ ಕೊಡಲು ಒಪ್ಪಿಲ್ಲದ ಕಾರಣ ಗ್ರಾಮದಲ್ಲಿ ಪಂಚಾಯಿತಿ ಆಗಿತ್ತು ಎಂದು ಹೇಳಿದ್ದು, ಯಾರು ಯಾರು ಸೇರಿದ್ದರು ಹೇಳುವಿರಾ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಈಗಾಗಲೇ ಒಪ್ಪಿ ಗೆ ಪತ್ರ ಬರೆದುಕೊಟ್ಟಿದ್ದು ದಾವಾ ಸ್ವತ್ತಿನಲ್ಲಿ ನನಗೆ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈಗಾಗಲೇ ನನಗೆ ಸೈಟನ್ನು ನೀಡಿದ್ದಾರೆ ಆಗಾಗಿ ಹಕ್ಕಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ತೀರಿಕೊಂಡ ನಂತರ ದಾವಾ ಸ್ವತ್ತಿನ ಮೊದಲನೇ ಮಹಡಿಯಲ್ಲಿ ಸ್ವಲ್ಪ ದಿನ ವಾಸ ಇರುತ್ತೇನೆ ಎಂದು ವಾದಿಯನ್ನು ಕೇಳಿ ಅನುಮತಿ ಪಡೆದು ವಾಸ ಇದ್ದೇನೆ ಎಂದರೆ ಸಾಕ್ಷಿಯು ನಾನೇ ಮೊದಲನೇ ಮಹಡಿಯಲ್ಲಿ ಮಾರ್ಬಲ್ ಶೀಟ್ ಹಾಕಿ ಸ್ವಂತ ಖರ್ಚಿನಲ್ಲಿ ಮನೆ ಮಾಡಿದ್ದೇನೆ ಎನ್ನುತ್ತಾರೆ. ಮೊದಲನೇ ಮಹಡಿಯಲ್ಲಿ ಮಾರ್ಬಲ್ ಶೀಟ್ ಹಾಕಿಸಿಕೊಂಡ ಬಗ್ಗೆ ವಸ್ತುಗಳನ್ನು ಖರೀದಿಸಿದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನನ್ನ ತಂದೆ ಕಟ್ಟಿಸಿಕೊಟ್ಟರು ಎನ್ನುತ್ತಾರೆ.  ದಾವಾ ಆಸ್ತಿಯ ಹಕ್ಕನ್ನು ನಾನು 2ನೇ ಪ್ರತಿವಾದಿಯಿಂದ ರೂ.575000/- ಹಣವನ್ನು ಪಡೆದು ಅವರ ಭಾಗಕ್ಕೆ ಒಪ್ಪಿ ಗೆ ಪತ್ರ

ಮಾಡಿಕೊಡುವ ಮೂಲಕ  ಅವರಿಗೆ ದಾವಾ ಆಸ್ತಿಯ ಹಕ್ಕನ್ನು ಬಿಟ್ಟುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ